RNU AIR DHARWAD

# JANUARY 04, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ‘ಆಯು ್ಮಾನ್ ಭಾರತ ಆರೋಗ್ಯ ಯೋಜನೆ’; ದೇಶದ ಜನರ ಆರೋಗ್ಯ ಕಾಪಾಡುವಲ್ಲಿ, ಯಶಸ್ವಿ – ರಾಷ್ಟ್ರಪತಿ ದ್ರೌಪದಿ ಮುರ್ಮು.
- ಮಹಾತ್ಮ ಗಾಂಧಿ ನರೇಗಾ ಯೋಜನೆ; ಬೆಳಗಾವಿ ಜಿಲ್ಲೆಯಲ್ಲಿ, ವಯಕ್ತಿಕ ಕಾಮಗಾರಿಯ, 23 ಸಾವಿರದ 380, ಬೇಡಿಕೆ ಅರ್ಜಿಗಳ ಸಲ್ಲಿಕೆ.
- ಲಿಂಗತ್ವ ಅಲ್ಪಸಂಖ್ಯಾತರೇ ನಿರ್ವಹಿಸುವ, ಮಾದರಿ ‘ಅಕ್ಕ ಕೆಫೆ’ಗೆ, ಇಂದು ಹಾವೇರಿ ಜಿಲ್ಲೆ, ದೇವಗಿರಿಯಲ್ಲಿ ಚಾಲನೆ.
- ಲೂಯಿಸ್ ಬ್ರೈಲ್ ಅವರ 216ನೇ ಜನ್ಮ ದಿನ; ಬ್ರೈಲ್ ಲಿಪಿ ಪಿತಾಮಹನಿಗೆ, ಇಂದು ಗೌರವಾರ್ಪಣೆ.

<><><>

ಕೇಂದ್ರ ಸರ್ಕಾರ, ದೇಶದ ಜನರ ಆರೋಗ್ಯ ಕಾಪಾಡಲು, ‘ಆಯು ್ಮಾನ್ ಭಾರತ ಆರೋಗ್ಯ ಯೋಜನೆ’ ಜಾರಿಗೆ ತಂದಿದೆ. ಬಡವರು, ಗ್ರಾಮೀಣ ಜನತೆಗೆ ದೊರೆಯುತ್ತಿದ್ದ ಸೌಕರ್ಯವನ್ನು, 70 ವ ್ಷ ಪೂರೈಸಿದ ಹಿರಿಯ ನಾಗರಿಕರಿಗೂ ವಿಸ್ತರಿಸಿದೆ ಎಂದು, ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಬೆಳಗಾವಿಯಲ್ಲಿ, ಕೆ.ಎಲ್.ಇ. ಸಂಸ್ಥೆಯ ಸಂಪತಕುಮಾರ ಶಿವಣಗಿ, ನೂತನ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆಯನ್ನು ಉದ್ಘಾಟಿಸಿ, ಮಾತನಾಡಿದರು. ದೇಶಾದ್ಯಂತ, ಸಾವಿರಕ್ಕೆ ನೂರು ಜನ ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಸಕಾಲಿಕ, ಸೂಕ್ತ ಮತ್ತು ಗುಣಮಟ್ಟದ ಚಿಕಿತ್ಸೆ, ಆಸ್ಪತ್ರೆಗಳ ಆದ್ಯತೆಸಯಾಗಬೇಕು ಎಂದರು.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, ದೇಶದಲ್ಲಿ ಪ್ರತಿಶತ 12 ದಶಾಂಶ 8ರ ್ಟು ಜನ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ. ಕೇಂದ್ರ ಸರ್ಕಾರ ಸಾರ್ವಜನಿಕ ಆರೋಗ್ಯ ಕಾಪಾಡಲು, ವಿಶೇ ್ ಆದ್ಯತೆ ನೀಡಿದೆ ಎಂದರು.

<><><>

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ರೈತರ ಬದುಕಿಗೆ ಬೆಳಕಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಫೇಸ್‌ಬುಕ್ ನಲ್ಲಿ, ಪ್ರಕಟಿಸಿದ್ದಾರೆ. ಗ್ರಾಮೀಣ ಭಾಗದ ಜನ, ತಮ್ಮ ವಯಕ್ತಿಕ ಕಾಮಗಾರಿಗಳ ಬೇಡಿಕೆಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಈ ವಿನೂತನ ವ್ಯವಸ್ಥೆಗೆ ರಾಜ್ಯಾದ್ಯಂತ ಉತ್ತಮ ಸ್ಪಂದನೆ ದೊರೆತಿದ್ದು, ಬೆಳಗಾವಿ ಜಿಲ್ಲೆಯೊಂದರಲ್ಲಿಯೇ 23 ಸಾವಿರದ 380 ಅರ್ಜಿಗಳು ಸಲ್ಲಿಕೆಯಾಗಿವೆ ಎಂದು, ತಿಳಿಸಿದ್ದಾರೆ.

<><><>

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ, ರೈತರು ಕೃಷಿ ಹೊಂಡ, ಬದು ನಿರ್ಮಾಣ, ಭೂಮಿ ಸುಧಾರಣೆ ಮಾಡಿಕೊಳ್ಳಬಹುದು. ಜೊತೆಗೆ ದನದ ಕೊಟ್ಟಿಗೆ ಮತ್ತು ಶೆಡ್ ನಿರ್ಮಿಸಿಕೊಳ್ಳಬಹುದು.

ತೋಟಗಾರಿಕೆ ಇಲಾಖೆಯಿಂದ ಬಾಳೆ, ಚಿಕ್ಕು, ಪೇರಲ, ಪಪ್ಪಾಯಿ, ದ್ರಾಕ್ಷಿ ಮೊದಲಾದ, ಹಣ್ಣಿನ ತೋಟಗಳನ್ನು ನಿರ್ಮಿಸಬಹುದು.

ಅರಣ್ಯ ಇಲಾಖೆ ವತಿಯಿಂದ ಹೊಲದ ಬದುಗಳಲ್ಲಿ ಸಸಿ ನೆಡಲು ಅವಕಾಶವಿದೆ.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು, ಚಿತಗಿ ಗ್ರಾಮದ ಸಾಧಕ ಕೃಷಿ ಸಖಿ, ಪ್ರತಿಮಾ ರವೀಂದ್ರ ಮೊಗವೀರ, ಜನವರಿ 26 ರ ಹೊಸ ದಿಲ್ಲಿಯ ಗಣರಾಜ್ಯೋತ್ಸವ ಸಮಾರಂಭಕ್ಕೆ ಪ್ರಧಾನಮಂತ್ರಿಯವರಿಂದ ವಿಶೇಷ ಆಹ್ವಾನಿತರಾಗಿದ್ದಾರೆ. ಕೃಷಿ ಇಲಾಖೆ ಹಾಗೂ ಮಹಿಳೆಯರ ನಡುವೆ ಕೊಂಡಿಯಾಗಿ ಕೆಲಸ ಮಾಡಿ, ಸರ್ಕಾರದ ಯೋಜನೆಗಳನ್ನು ಅವರಿಗೆ ತಲುಪಿಸುವ ಮಹತ್ವದ ಕಾರ್ಯದಲ್ಲಿ ತೊಡಗಿಕೊಂಡಿರುವುದು, ಅತ್ಯಂತ ಖುಷಿಯ ವಿಚಾರ ಎನ್ನುತ್ತಾರೆ, ಕೃಷಿ ಸಖಿ ಪ್ರತಿಮಾ.

<><><>

ಕೃಷಿ ಸಖಿ ಪ್ರತಿಮಾ ರವೀಂದ್ರ ಧ್ವನಿ 50 ಸೆಕೆಂದುಗಳು

<><><>

ಕೊಪ್ಪಳ ಹಾಗೂ ಯಲಬುರ್ಗಾ ವ್ಯಾಪ್ತಿಯ, 6 ಕೆರೆ ತುಂಬಿಸುವ ಯೋಜನೆಯ ಮೊದಲ ಹಂತದ ಕಾಮಗಾರಿಯನ್ನು 2 ಕೋಟಿ 83 ಲಕ್ಷ ರೂಪಾಯಿ ವೆಚ್ಚದಲ್ಲಿ, ಪೂರ್ಣಗೊಳಿಸಲಾಗುವುದು ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್. ಎಸ್. ಬೋಸರಾಜು ತಿಳಿಸಿದ್ದಾರೆ. ಕೊಪ್ಪಳ ತಾಲೂಕಿನ ನಾರಾಯಣ ಪೇಟೆ ಗ್ರಾಮದಲ್ಲಿ, ಜಾಕವೆಲ್ ಮತ್ತು ಪಂಪ ಹೌಸ್ ವೀಕ್ಷಿಸಿ, ಸುದ್ದಿಗಾರರೊಂದಿಗೆ ಮಾತನಾಡಿದರು. ಕೊಪ್ಪಳ ಜಿಲ್ಲೆಯ ಹಿರೇಹಳ್ಳ ಏತ ನೀರಾವರಿ ಯೋಜನೆ, ಕು ್ಟಗಿ ಏತ ನೀರಾವರಿ ಯೋಜನೆಗಳ ಪ್ರಗತಿಯನ್ನು, ಇಂದು ಖುದ್ದು ಪರಿಶೀಲಿಸುವುದಾಗಿ, ಸಚಿವರು ಹೇಳಿದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆಯ, ಹೂವಿನ ಬೆಳೆಗಾರರು ಮತ್ತು ವ್ಯಾಪಾರಿಗಳ ಆರ್ಥಿಕ ಹಿತದೃಷ್ಟಿಯಿಂದ, ತಾಲೂಕಿನ ನಂದಿ ಬಳಿ, ತೋಟಗಾರಿಕೆ ಇಲಾಖೆಗೆ ಸೇರಿದ, 20 ಎಕರೆ ಜಾಗೆಯಲ್ಲಿ, 140 ಕೋಟಿ ರೈಪಾಯಿ ವೆಚ್ಚದ, ಹೈಟೆಕ್ ಹೂ ಮಾರುಕಟ್ಟೆ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಸಿ.ಸುಧಾಕರ್ ತಿಳಿಸಿದ್ದಾರೆ. ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಸಚಿವರು ಸಭೆ ನಡೆಸಿದರು. ಈಗಾಗಲೇ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನಲ್ಲಿ, 200 ಕೋಟಿ ರೂಪಾಯಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಿಸಲು ಹಣ ಮಂಜೂರಾಗಿದೆ ಎಂದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ 'ಸಂಜೀವಿನಿ', ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ, ಹಾವೇರಿ ಜಿಲ್ಲೆಯಲ್ಲಿ ಎರಡು 'ಅಕ್ಕ ಕೆಫೆ' ಗಳು, ಕಾರ್ಯನಿರ್ವಹಿಸಲು ಸಿದ್ಧಗೊಂಡಿವೆ. ಜಿಲ್ಲಾ ಪಂಚಾಯ್ತಿ ಕಟ್ಟದಲ್ಲಿ ನಿರ್ಮಿಸಲಾದ 'ಅಕ್ಕ ಕೆಫೆ'ಯನ್ನು, ಇಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಉದ್ಘಾಟಿಸಲಿದ್ದಾರೆ. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಮಹಿಳೆಯರು, ಈ ಕೆಫೆಯನ್ನು ನಡೆಸಲಿರುವುದು ವಿಶೇಷ. ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಅಕ್ಷಯ ಶ್ರೀಧರ ಪ್ರದೇಶ ಸಮಾಚಾರಕ್ಕಾಗಿ, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಸಿ.ಇ.ಓ. ಅಕ್ಷಯ ಶ್ರೀಧರ ಧ್ವನಿ 38 ಸೆಕೆಂದುಗಳು

<><><>

ಲೂಯಿಸ್ ಬ್ರೈಲ್ ಅವರ 216ನೇ ಜನ್ಮದಿನದ ಹಿನ್ನೆಲೆ, ಬೆಳಗಾವಿಯ ನೆಹರು ನಗರದ ಶ್ರೀ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯಲ್ಲಿ, ಹಿರಿಯ ವಿದ್ಯಾರ್ಥಿಗಳು, ಬ್ರೈಲ್ ಲಿಪಿ ಪಿತಾಮಹನ ಕಂಚಿನ ಪುತ್ಥಳಿಯನ್ನು ಇಂದು, ಬೆಳಗ್ಗೆ 9 ಗಂಟೆಗೆ ಪ್ರತಿಷ್ಠಾಪಿಸಲಿದ್ದಾರೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸ್ವತಃ ದೃಷ್ಟಿ ವಿಶೇಷಚೇತನರಾಗಿರುವ, ಧಾರವಾಡದ ಮನಗುಂಡಿಯ, ಶ್ರೀ ಗುರು ಬಸವ ಮಹಾಮನೆಯ ಪೀಠಾಧಿಪತಿ, ಶ್ರೀ ಬಸವಾನಂದ ಸ್ವಾಮೀಜಿ.

<><><>

ಶ್ರೀ ಬಸವಾನಂದ ಸ್ವಾಮೀಜಿ ಧ್ವನಿ 50 ಸೆಕೆಂದುಗಳು

<><><>

ಮಜೇಥಿಯಾ ಫೌಂಡೇಷನ್, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ಆನಂದನಗರದ, ಹನುಮಯ್ಯ ಬಡಾವಣೆಯ, ದೃಷ್ಟಿ ವಿಶೇಷಚೇತನ ಬಾಲಕರ ಸರ್ಕಾರಿ ಶಾಲೆಯಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ ಲೂಯಿ ಬ್ರೈಲ್ ಅವರ 216ನೇ ಜನ್ಮದಿನೋತ್ಸವ ಆಯೋಜಿಸಿದೆ. ದೃಷ್ಟಿ ವಿಶೇಷಚೇತನ ಮಕ್ಕಳಿಗೆ ವಿವಿಧ ಸಲಕರಣೆಗಳನ್ನು, ಮಜೇಥಿಯಾ ಫೌಂಡೇಷನ್ ಚೇರ್‌ಮನ್ ಜಿತೇಂದ್ರ ಮಜೇಥಿಯಾ ವಿತರಿಸಲಿದ್ದಾರೆ. ಶ್ರೀ ಸದ್ಗುರು ಸಿದ್ಧಾರೂಢ ಸ್ವಾಮಿ ಅಂಧ ಮಕ್ಕಳ ಶಾಲೆ ಅಧ್ಯಕ್ಷ ಗುರುಸಿದ್ಧೇಶ್ವರ ಲಕ್ಕುಂಡಿ ಅತಿಥಿಗಳಾಗಿ ಪಾಲ್ಗೊಳ್ಳುವರು.

<><><>

ಸಣ್ಣಾಟ ಕ್ಷೇತ್ರದ ದಿಗ್ಗಜ ಕಲಾವಿದೆ, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲೂಕು, ಧುಳಗನವಾಡಿ ಗ್ರಾಮದ, 87 ವರ್ಷದ, ಯಮುನಾಬಾಯಿ ಲಕ್ಷ್ಮಣ ಕಲಾಚಂದ್ರ ಅವರಿಗೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಕರ್ನಾಟಕ ಸುವರ್ಣ ಸಂಭ್ರಮ ಪ್ರಶಸ್ತಿ ನೀಡಿ, ಗೌರವಿಸಿದರು. ಯಕ್ಷಗಾನ ಮತ್ತು ಬಯಲಾಟ ಅಕಾದೆಮಿ ಪ್ರಶಸ್ತಿ ಪುರಸ್ಕೃತರೂ ಆಗಿರುವ, ಯಮುನಾಬಾಯಿ ಅವರು, 20ಕ್ಕೂ ಅಧಿಕ ಕಲಾ ತಂಡಗಳಿಗೆ ಸಣ್ಣಾಟದ ತರಬೇತಿಯನ್ನು ನೀಡಿದ್ದಾರೆ.

<><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ, ಇದೇ 7 ರಂದು ಬಾಹ್ಯಾಕಾಶ ನಿಲ್ದಾಣದಲ್ಲಿ, 'ಡಾಕಿಂಗ್ ಪ್ರಯೋಗ' ಕೈಗೊಳ್ಳಲು, ಬೆಂಗಳೂರಿನ ಪೀಣ್ಯದ, ಇಸ್ರೋ ಟೆಲಿಮೆಟ್ರಿ, ಟ್ರ್ಯಾಕಿಂಗ್, ಕಮಾಂಡ್ ನೆಟ್‌ವರ್ಕ್ ಕೇಂದ್ರವನ್ನು ಸಜ್ಜುಗೊಳಿಸಿದೆ. ಅಂದು ಬೆಳಗ್ಗೆ 9 ರಿಂದ 10 ಗಂಟೆಯ ನಡುವೆ, ಡಾಕಿಂಗ್ ಪ್ರಯೋಗ ನಡೆಸಲಾಗುವುದು ಎಂದು, ಇಸ್ರೋ ತಿಳಿಸಿದೆ. ಡಿಸೆಂಬರ್ 30 ರಂದು ಶ್ರೀಹರಿಕೋಟಾದಿಂದ ಎರಡು ಉಪಗ್ರಹಗಳನ್ನು, ಪಿ.ಎಸ್.ಎಲ್.ವಿ. – ಸಿ 60 ನೌಕೆಯ ಮೂಲಕ ಉಡಾವಣೆ ಮಾಡಿದ್ದು, ಉಪಗ್ರಹಗಳು ಈಗಾಗಲೇ ನಿಗದಿತ ಕಕ್ಷೆಗೆ ಸೇರಿವೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಸಮಾಜ ಸುಧಾರಕಿ, ಅಕ್ಷರದ ಅವ್ವ, ಸಾವಿತ್ರಿಬಾಯಿ ಫುಲೆ ಅವರ ಜನ್ಮ ದಿನದ ಹಿನ್ನೆಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಗೌರವಾರ್ಪಿಸಿದ್ದಾರೆ.

<><><>

ಧಾರವಾಡದ ಹೊಸ ಮಹಾನಗರ ಪಾಲಿಕೆ ರಚನೆಯಿಂದ, ನಗರದ ಅಭಿವೃದ್ಧಿಗೆ ವೇಗ ದೊರೆಯಲಿದೆ ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ಹುಬ್ಬಳ್ಳಿಯಲ್ಲಿ ಹೇಳಿದ್ದಾರೆ.

<><><>

ಕಲಬುರಗಿಯ, ಶ್ರೀ ಶರಣಬಸವೇಶ್ವರ ದೇವಸ್ಥಾನದಿಂದ, ಕಲಬುರಗಿ ಕೋಟೆ ವರೆಗೆ 'ನಮ್ಮ ನಡೆ ಕೋಟೆ ಕಡೆ', ಪಾರಂಪರಿಕ ನಡಿಗೆ ಗಮನ ಸೆಳೆಯಿತು.

<><><>

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ, ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಮೂರು ದಿನಗಳ 10ನೇ ಅಂತರ್ ವಿಶ್ವವಿದ್ಯಾಲಯಗಳ ಯುವಜನೋತ್ಸವಕ್ಕೆ, ಗಣ್ಯರು ಚಾಲನೆ ನೀಡಿದರು.

<><><>

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ, ಇಂದು ಬೆಳಗ್ಗೆ 9 ಗಂಟೆಗೆ, ಅಧಿಕೃತ ಭಾ ಾ ಇಲಾಖೆಯಿಂದ, ದಕ್ಷಿಣ ಮತ್ತು ನೈಋುತ್ಯ ವಲಯದ ಪ್ರಾದೇಶಿಕ ಅಧಿಕೃತ ಭಾ ಾ ಸಮ್ಮೇಳನ ಆಯೋಜಿತವಾಗಿದೆ.

<><><>

ರಾಜ್ಯದ ಕನಿಷ್ಠ ತಾಪಮಾನ, 10 ಡಿಗ್ರಿ ಸೆಲ್ಶಿಯಸ್ ಬೀದರ್‌ನಲ್ಲಿ ದಾಖಲಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಆಯು ್ಮಾನ್ ಭಾರತ ಆರೋಗ್ಯ ಯೋಜನೆ'; ದೇಶದ ಜನರ ಆರೋಗ್ಯ ಕಾಪಾಡುವಲ್ಲಿ, ಯಶಸ್ವಿ – ರಾಷ್ಟ್ರಪತಿ ದ್ರೌಪದಿ ಮುರ್ಮು.
- ಮಹಾತ್ಮ ಗಾಂಧಿ ನರೇಗಾ ಯೋಜನೆ; ಬೆಳಗಾವಿ ಜಿಲ್ಲೆಯಲ್ಲಿ, ವಯಕ್ತಿಕ ಕಾಮಗಾರಿಯ, 23 ಸಾವಿರದ 380, ಬೇಡಿಕೆ ಅರ್ಜಿಗಳ ಸಲ್ಲಿಕೆ.

- ಲಿಂಗತ್ವ ಅಲ್ಪಸಂಖ್ಯಾತರೇ ನಿರ್ವಹಿಸುವ, ಮಾದರಿ 'ಅಕ್ಕ ಕೆಫೆ'ಗೆ, ಇಂದು ಹಾವೇರಿ ಜಿಲ್ಲೆ, ದೇವಗಿರಿಯಲ್ಲಿ ಚಾಲನೆ.

- ಲೂಯಿ ಬ್ರೈಲ್ ಅವರ 216ನೇ ಜನ್ಮ ದಿನ; ಬ್ರೈಲ್ ಲಿಪಿ ಪಿತಾಮಹನಿಗೆ, ಇಂದು ಗೌರವಾರ್ಪಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ